# ಅಮ್ಮನ ಭಾಷೆ

ಬದುಕು ಸಾಗಲಿಕ್ಕೆ ಎರಡು ಭಾಷೆಗಳ ಊರುಗೋಲು ಬೇಕು. ಒಂದು, ಹೃದಯದ ಭಾಷೆ, ಅಂತರಂಗದ ಅಗತ್ಯಗಳನ್ನು ಪೂರೈಸಲು ಒದಗುವಂತಹದ್ದು, ಕುಟುಂಬ ಹಾಗೂ ಪರಿಸರದೊಂದಿಗಿನ ನಂಟು ಗಾಢಗೊಳಿಸುವಂತಹದ್ದು. ಮತ್ತೊಂದು, ಜೀವನದ ಲೌಕಿಕ ವ್ಯವಹಾರಗಳಿಗೆ ದ್ರವ್ಯವಾಗಿ ಪರಿಣಮಿಸುವಂತಹದು. ಹೃದಯ ಮಿಡಿತದ ನುಡಿ ತಾಯ್ನುಡಿಯಾದರೆ, ಬದುಕಿನ ಗಣಿತಕ್ಕೆ ಒದಗುವುದು ಅನ್ನದ ಭಾಷೆ. ಬದುಕಿಗೆ ಎರಡೂ ಬೇಕು. ಅನ್ನವಿಲ್ಲದಿರೆ ಬದುಕಿಲ್ಲ, ಒಲವಿಲ್ಲದಿರೆ ಬದುಕಿಗೆ ಅರ್ಥವಿಲ್ಲ. ಒಲವು ಹಾಗೂ ಅನ್ನ, ಎರಡೂ ರೂಪದಲ್ಲಿ ಒಂದೇ ಭಾಷೆ ಒದಗುವಂತಹ ಉದಾಹರಣೆಗಳು ತೀರಾ ವಿರಳ. ಇಂಥ ನಿದರ್ಶನಗಳು, ಭಾರತದಂತಹ ಬಹುಭಾಷಿಕ ದೇಶಗಳಲ್ಲಿ ಕಷ್ಟಸಾಧ್ಯ.

ನಮ್ಮ ಪೂರ್ವಸೂರಿಗಳಿಗೆ ಅನ್ನ, ಒಲವು, ತಿಳಿವು, ಅದಕು ಇದಕು ಎದಕು ತಾಯ್ನುಡಿಯೇ ಸೆಲೆಯಾಗಿತ್ತು. ಇಹಕೂ ಪರಕೂ ಕನ್ನಡವೇ ನಾವೆಯಾಗಿತ್ತು. ಇದು ಜಾಗತೀಕರಣದ ಕಾಲ. ಮೊಬೈಲ್‌ಫೋನಿನ ರೂಪದಲ್ಲಿ ವಿಶ್ವವನ್ನು ಅಂಗೈಯಲ್ಲಿ ಇರಿಸಿಕೊಂಡಿರುವ ದಿನಗಳಲ್ಲಿ ದಿಗಂತದಲ್ಲಿ ಹಾರಲು ಭಾಷೆಯೆಂಬ ರೆಕ್ಕೆ ಬೇಕು. ಆ ರೆಕ್ಕೆ ಕಟ್ಟುವ ಕಸುವು ನಮ್ಮ ತಾಯ್ನುಡಿಗಿದೆಯೆ? ಆ ಸಾಮರ್ಥ್ಯವನ್ನು ನಮ್ಮ ನುಡಿಗೆ ನಾವು ತಂದುಕೊಟ್ಟಿದ್ದೇವೆಯೆ? ಹಾಗೆಂದು ನಮ್ಮ ನುಡಿ ಎರಡನೆಯದೆಂದರ್ಥವಲ್ಲ. ಲೋಕಾಂತಕ್ಕೆ ಇಂಗ್ಲಿಷ್ ಅಗತ್ಯವಾದರೂ, ಏಕಾಂತಕ್ಕೆ ತಾಯ್ನುಡಿಯೇ ಬೇಕು. ಅಗತ್ಯಕ್ಕೆ ಅನುಗುಣವಾಗಿ ಹೊರಗಿನ ಪೋಷಾಕು ಬದಲಿಸಬಹುದು; ಒಳಗಿನ ಬೆಳಕು–ಕಾವನ್ನು ಕದಲಿಸಲಾಗದು. ಬಹಿರಂಗಕ್ಕೆ ತಕ್ಕಂತೆ ಅಂತರಂಗವನ್ನು ಬದಲಿಸಹೊರಟರೆ, ದೊರೆಯುವುದು ತ್ರಿಶಂಕು ಸ್ವರ್ಗವಷ್ಟೇ.

ಮುಗಿಲಿನಲ್ಲಿ ಎಷ್ಟೇ ಎತ್ತರದಲ್ಲಿ ಹಾರಿದರೂ, ಕಡಲಿನಾಳದಲ್ಲಿ ವಿಹರಿಸಿದರೂ, ಕೊನೆಗೆ ಗೂಡಿನ ಗುರುತ್ವಾಕರ್ಷಣೆಗೆ ಒಳಗಾಗಲೇಬೇಕು. ಗೂಡು ಅಮ್ಮನಂತೆ ಪೊರೆಯುವುದು. ಜೋಗುಳ ಹಾಡಿ ಮಡಿಲಾಗುವುದು. ದಿನದ ಕ್ಷೋಭೆಯನ್ನೆಲ್ಲ ಶಮನಗೊಳಿಸುವುದು. ಅಂಥ ಗೂಡಿನ ಗುರುತ್ವವೇ ತಾಯ್ನುಡಿ. ಬದುಕಿನ ಯಾವುದೋ ಘಟ್ಟದಲ್ಲಿ ಅಮ್ಮ ಕೈಬಿಡಬಹುದು; ತಾಯ್ನುಡಿ ಕೊನೆಯುಸಿರಿನವರೆಗೂ ಬೆರಳು ಹಿಡಿದು ನಡೆಸುವುದು. ನೊಂದಾಗ ಅಮ್ಮ ಎನ್ನುತ್ತೇವಷ್ಟೇ. ಆಗ, ತಾಯಿಗರುಳಷ್ಟೇ ಓ ಎನ್ನದು; ತಾಯಿರೂಪದ ನುಡಿಗರುಳೂ ಹೊರಳುವುದು. ಕರುಳೇ ಕೊರಳಾಗಿ ಕಂಠವಾಗಿ ಕನ್ನಡವಾಗಿ ತಬ್ಬಿಕೊಳ್ಳುವುದು.

ತಾಯ್ನುಡಿ ಹೃದಯದ ಭಾಷೆಯಷ್ಟೇ ಅಲ್ಲ, ಕರುಳಿನ ಭಾಷೆಯೂ ಹೌದು. ಭ್ರೂಣದಲ್ಲಿ ತಾಯಿಗರುಳಿನ ಮೂಲಕ ಶುರುವಾಗುವ ಸಂಬಂಧ ನಂತರದಲ್ಲಿ ಹೃದಯಸಂವಾದವಾಗಿ ಬದಲಾಗುತ್ತದೆ. ಕಣ್ಣರಿಯದಿದ್ದರೂ ಕರುಳರಿಯುತ್ತದೆ ಎನ್ನುವ ಮಾತು ಸೂಚಿಸುವುದು ಕಳ್ಳುಬಳ್ಳಿ ಮೂಲಕ ರೂಪುಗೊಂಡ ಸಂಬಂಧವನ್ನೇ.

‘ವ್ಯಕ್ತಿಗೆ ಅರ್ಥವಾಗುವ ಭಾಷೆಯಲ್ಲಿ ಮಾತನಾಡಿದರೆ, ಆ ಮಾತು ಆತನ ತಲೆಯನ್ನು ಪ್ರವೇಶಿಸುತ್ತದೆ. ಆ ವ್ಯಕ್ತಿಯ ಭಾಷೆಯಲ್ಲಿಯೇ ಮಾತನಾಡಿದ್ದಾದರೆ, ಆ ಮಾತು ಆತನ ಹೃದಯವನ್ನು ಹೊಗುತ್ತದೆ’ ಎನ್ನುವ ನೆಲ್ಸನ್ ಮಂಡೇಲಾ ಮಾತು, ತಾಯ್ನುಡಿ ‘ಹೃದಯದ ಭಾಷೆ’ ಎನ್ನುವುದಕ್ಕೆ ಅಡಿಗೆರೆ ಎಳೆಯುವಂತಿದೆ. ಅಮ್ಮನ ಎದೆಹಾಲಿನ ಮೂಲಕ ಅಮೃತವಾಹಿನಿಯೊಂದು ಎದೆಯಿಂದ ಎದೆಗೆ ಹರಿಯುತಿದೆ ಸತತ. ಮೊಲೆಯೊಂದಿಗೆ ನುಡಿಯನ್ನೂ ಉಣಿಸುವಳು ತಾಯಿ. ಅಮ್ಮನಿಂದ ಎದೆಯಹಾಲು ಹಾಗೂ ಎದೆಯಭಾಷೆ ಕೂಸಿನ ಮೈಗೂಡುವುದು. ‘ಮೊದಲು ತಾಯ ಹಾಲ ಕುಡಿದು / ನಲ್ಮೆಯಿಂದ ತೊದಲಿ ನುಡಿದು / ಗೆಳೆಯರೊಡನೆ ಬೆಳೆದು ಬಂದ ಮಾತದಾವುದು’ ಎನ್ನುತ್ತಾರೆ ಬಿ.ಎಂ. ಶ್ರೀಕಂಠಯ್ಯ. ಗುರುಗಳ ನಲ್ನುಡಿಯನ್ನು ಕುವೆಂಪು ವಿಸ್ತರಿಸಿರುವುದು ಹೀಗೆ: ‘ಮೊಲೆಯ ಹಾಲೆಂತಂತೆ ಸವಿಜೇನು ಬಾಯ್ಗೆ; ತಾಯಿಯಪ್ಪುಗೆಯಂತೆ ಬಲುಸೊಗಸು ಮೆಯ್ಗೆ; ಗುರುವಿನೊಳ್ನುಡಿಯಂತೆ ಶ್ರೇಯಸ್ಸು ಬಾಳ್ಗೆ.’

ಮೊಲೆಯೊಂದಿಗೆ ನುಡಿಯನ್ನೂ ಅಮ್ಮನುಣಿಸುತ್ತಾಳಷ್ಟೇ. ಹಾಗೆ, ತಾಯ ಒಲವುಂಡವರು ನುಡಿಯನ್ನು ಉಳಿಸಿ ಬೆಳೆಸಲು ಉತ್ತರದಾಯಿಗಳು. ತಾಯ್ನುಡಿಯನ್ನು ಉಳಿಸುವುದು, ಕನ್ನಡಕೆ ಹೋರಾಡುವುದು ಬರಿಯ ಕರ್ತವ್ಯವಲ್ಲ, ಅದು ‘ಜೋಗುಳದ ಹರಕೆ.’ ‘ಕನ್ನಡವ ಕಾಪಾಡು’ ಎನ್ನುವ ಜೋಗುಳದ ಹರಕೆಯನ್ನು ‘ಮರೆತೆಯಾದರೆ ಅಯ್ಯೊ ಮರೆತಂತೆ ನನ್ನ!’ ಎನ್ನುತ್ತಾರೆ ಕುವೆಂಪು. ಇಂದಿನ ವಿದ್ಯಮಾನಗಳೋ, ಮಕ್ಕಳು ಮಾಯಿಯನ್ನು ಮರೆಯುವುದೇ ಕಾಲಧರ್ಮ ಎನ್ನುವಂತಿವೆ. ಎದೆಯುಣಿಸಿನ ರುಚಿ ಬದಲಾಗುವುದು, ಎದೆನುಡಿಯ ಚಿಲಿಪಿಲಿ ಬದಲಾಗುವುದು ವರ್ತಮಾನದ ಲಕ್ಷಣಗಳಂತಿವೆ. ಕೌಟುಂಬಿಕ ಸಂಬಂಧಗಳು ಕ್ಷೀಣಿಸುತ್ತಿರುವುದಕ್ಕೂ, ಹಿರಿಯ ನಾಗರಿಕರು ಒಂಟಿಯಾಗುತ್ತ ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚುತ್ತಿರುವುದಕ್ಕೂ ಹಾಗೂ ತಾಯ್ನುಡಿ ಹಿನ್ನೆಲೆಗೆ ಸರಿಯುತ್ತಿರುವುದಕ್ಕೂ ಸಂಬಂಧ ಇರಬಹುದೆ? ಗಾಂಧಿ ಹೇಳುತ್ತಾರೆ: ‘ಒಬ್ಬರು ತಾಯ್ನುಡಿಯನ್ನು ಕಳೆದುಕೊಳ್ಳುವುದೆಂದರೆ, ಆತ್ಮವನ್ನು ಕಳೆದುಕೊಳ್ಳುವುದೆಂದರ್ಥ.’

ಕನ್ನಡದ ನಾಳೆಗಳು ಹೇಗಿರುತ್ತವೆ? ನೂರು ವರ್ಷಗಳ ನಂತರ ಕನ್ನಡ ಇರುತ್ತದಾ? ಆಗಾಗ ಧುತ್ತೆಂದು ಎಡತಾಕಿ ಕಾಡುವ ಆತಂಕಗಳಿವು. ಈ ಪ್ರಶ್ನೆಗಳ ಧಾಟಿಯನ್ನು ಪರಿಷ್ಕರಿಸಿಕೊಳ್ಳಬಹುದು: ‘ಸಂಬಂಜ ಅನ್ನೋದು ದೊಡ್ಡದು ಕನಾ’ (ದೇವನೂರ ಮಹಾದೇವ), ‘ಸಪ್ಪೆ ಅನ್ನೇಡ, ಒಂದ್ಕಲ್ ಉಪ್ಪಾಕು’ (ನಾಗತಿಹಳ್ಳಿ ರಮೇಶ) ಎನ್ನುವ ಮಾತುಗಳನ್ನು ನಮ್ಮ ಮುಂದಿನ ತಲೆಮಾರುಗಳು ಹೇಗೆಂದು ಅರ್ಥೈಸಬಹುದು? ಈಗಾಗಲೇ ವಿಘಟನೆಯ ಹಾದಿಯಲ್ಲಿರುವ ಭಾರತೀಯ ಕುಟುಂಬಗಳ ಸ್ವರೂಪ ನೂರು ವರ್ಷಗಳ ನಂತರ ಹೇಗಿರಬಹುದು?

ತಾಯ್ನುಡಿಯೆನ್ನುವುದು ಬದುಕೆನ್ನುವ ಮಣ್ಣಿನಿಂದ ಚಿಮ್ಮಿದ ಬಳ್ಳಿಯ ಹೂ. ಕರುಳು ಹೃದಯದ ನುಡಿಯನ್ನು ಬಿಟ್ಟುಕೊಡುವುದೆಂದರೆ, ಬದುಕಿನಿಂದ ಆರ್ದ್ರತೆಯನ್ನು ಬಿಟ್ಟುಕೊಟ್ಟಂತೆ, ಹೂವಿನಿಂದ ಪರಿಮಳವನ್ನು ದೂರಮಾಡಿದಂತೆ, ಮಣ್ಣಿನಿಂದ ಗಂಧವನ್ನು ತೇವವನ್ನು ಬೇರ್ಪಡಿಸಿದಂತೆ. ಮಣ್ಣಿನ ಹಂಗು, ಹೂವಿನ ಪರಿಮಳ, ಹಕ್ಕಿಯ ಚಿಲಿಪಿಲಿಯಿಂದ ಮನುಷ್ಯ ದೂರವುಳಿಯುವ ಕಾಲ ಬರಬಹುದೆ?

ನಮ್ಮ ಮಕ್ಕಳ ನಾಳೆಗಳು ಹೇಗಿರಬೇಕು ಎನ್ನುವ ಚಿಂತನೆಯಲ್ಲಿ ತಾಯ್ನುಡಿಯ ಉಳಿವು ಬೆಳವಿನ ಪ್ರಶ್ನೆಯೂ ಇದೆ.

■ **ಚಂಪಕಮಾಲಾ**

## ಮಾತೇ ಮುತ್ತು

- ಕರ್ನಾಟಕತ್ವವು ಅತ್ಯಂತ ಪರಿಶುದ್ಧ ಭಾವನೆ, ಅತ್ಯಂತ ವಿಶಾಲವಾದ ಭಾವನೆ. ಅದು ಕರ್ನಾಟಕದ ಹಿತಗಳೆಲ್ಲವನ್ನೂ ತನ್ನಲ್ಲಿ ಅಡಗಿಸಿಕೊಂಡಿದೆ.

  —ಆಲೂರು ವೆಂಕಟರಾಯರು

- ಸತ್ಯಕ್ಕೆ ಹೆದರುವವನು ಅಥವಾ ನಾಚುವವನು ನಿಜವಾದ ಜಿಜ್ಞಾಸುವಾಗಲಾರನು.

  —ಕುವೆಂಪು

- ಹೂವು ಬಳ್ಳಿಗೆ ದೀಪ, ಹಸಿರು ಬಯಲಿಗೆ ದೀಪ/ ಹುಲಿಯ ಕಣ್ಣಿನ ದೀಪ ಕಾಡಿನಲ್ಲಿ/ ಮುತ್ತು ಕಡಲಿಗೆ ದೀಪ ಹಕ್ಕಿ ಗಾಳಿಗೆ ದೀಪ/ ಗ್ರಹ ತಾರೆಗಳ ದೀಪ ಬಾನಿನಲ್ಲಿ.

  —ಕೆ.ಎಸ್. ನರಸಿಂಹಸ್ವಾಮಿ

- ನಾವು ನಂಬುವ ತತ್ವಗಳಿಗಿಂತ, ದೇವರಿಗಿಂತ, ನಾವು ಬದುಕುವ ರೀತಿ ಮುಖ್ಯ.

  —ಎ.ಎನ್. ಮೂರ್ತಿರಾವ್

- ಕೃತಿ ಕೆಟ್ಟದಿದ್ದು, ಮನಸ್ಸು ಸದಾ ಕೆಡುಕು ಬಯಸುತ್ತಿದ್ದು, ಸಜ್ಜನರಂತೆ ಮುಖವಾಡ ಧರಿಸುತ್ತಿರುವ ಜನರ ಬಗ್ಗೆ ಎಚ್ಚರದಿಂದಿರಬೇಕು.

  —ದ.ರಾ. ಬೇಂದ್ರೆ

- ನಾವು ಕೊಡುವ ಉಪದೇಶಕ್ಕೂ ನಮ್ಮ ಜೀವನಕ್ಕೂ ಸಂಬಂಧ ಇಲ್ಲದೆ ಹೋದರೆ ನಮ್ಮ ಮಾತಿಗೆ ಬೆಲೆ ಬಾರದು.

  —ಶಿವರಾಮ ಕಾರಂತ